
# ಘಟಸ್ಫೋಟ

■ ಲೋಕೇಶ ಅಗಸನಕಟ್ಟೆ
ಕಲೆ: ಎಸ್‌.ವಿ. ಹೂಗಾರ



‘ಏನು ಗುರಣ್ಣಾ.., ಹಿಂಗೇನು ಮಾಡಾದು?’ ತುಂಬಿನಕಟ್ಟೆಯಿಂದ ಬಸನಕಟ್ಟೆಗೆ ಹೊಂಟಿದ್ದ ಭುವನೇಶಿ ಗುರುನಾಥನನ್ನು ಕೇಳಿದ. ಅನ್ಯಮನಸ್ಕನಾಗಿ ಕೈಯಲ್ಲಿ ತುಪ್ಪದ ಬಾಟಲಿ ಹಿಡಿದು ಏನನ್ನೋ ಧೇನಿಸುತ್ತಾ ನೆಲ ನೋಡುತ್ತಾ ನಡೆಯುತ್ತಿದ್ದ ಗುರುನಾಥನಿಗೆ ಅವನ ಮಾತು ಪ್ರಜ್ಞೆಗೆ ತಾಗಲಿಲ್ಲ. ಸುಮ್ಮನೆ ನಡೆದುಹೋದ ಅವನನ್ನು ನೋಡಿ ‘ಏನೋ ಮಾರಾಯ, ಮಾತಾಡ್ಸಿದ್ರೂ ಕೇಳ್ಸದವನಂಗೆ ಹೊಕ್ತಿದ್ದೀಯಾ..!’ ಎಂದಾಗಲೂ ಗುರುನಾಥ ತಲೆ ಎತ್ತಿ ಕೂಡ ನೋಡಲಿಲ್ಲ. ‘ಏನೋ ಆಗೇತಿ ಬಿಡು ಇವ್ನಿಗೆ’ ಎಂದಂದುಕೊಂಡು ಭುವನೇಶಿ ಮುಂದಕ್ಕೆ ನಡೆದ.

ಬಸನಕಟ್ಟೆಯ ಕೇಂದ್ರವ ಬಿಡುವವರೆಗೂ ಖುಷಿಯಾಗಿಯೇ ಇದ್ದ ಗುರುನಾಥನಿಗೆ ಕೊಟ್ರೇಶಿ ‘ಏನು ಸ್ವಾಮೇರಾ ನೀವೂ ಆ ಮಾದ್ಗ ಬಸ್ವನ ಮನ್ಯಾಗೆ ಹೋಗಿ ಉಂಡು ಬಂದ್ರಂತೆ? ಮನೆಯಾಗೆ ಕಾದಿದವ ನಡ್ರಿ ಗಾಚಾರ’ ಎಂದಾಗಲೇ ಗುರುನಾಥನಿಗೂ ಬೆಚ್ಚಗಾಗಿ ಹೋಗಿತ್ತು. ಮನೆಯ ಭಯವೇನೂ ಅವನಿಗೆ ಇರಲಿಲ್ಲ. ಆದರೆ, ತನ್ನ ಓಣಿಯ ನೈಷ್ಠಿಕ ಬ್ರಾಹ್ಮಣರದ್ದೇ ಅವನಿಗೆ ಭಯ. ಶಂಕರನಾರಾಯಣನ ಮಗ ಪೂನಾದಲ್ಲಿ ಯಾವಳೋ ಮರಾಠಿ ಹೆಂಗಸನ್ನು ಕಟ್ಟಿಕೊಂಡನೆಂದು ಉರಿದುರಿದು ಬಿದ್ದು ‘ಅವ್ನ ಸತ್ತು ಹೋದ’ ಎಂದದ್ದೂ, ರಾಘಣ್ಣನ ಮಗಳು ಊರ ಚಲುವನ ಮಗನೊಂದಿಗೆ ಓಡಿಹೋದಾಗಲೂ ಅವನೂ ‘ಅವ್ಳು ಸತ್ಲು’ ಎಂದಿದ್ದೂ. ಈಗ ತಾನೇನೂ ಯಾರನ್ನೋ ಕಟ್ಟಿಕೊಂಡದ್ದಾಗಲೀ, ಓಡಿ ಹೋದದ್ದಾಗಲೀ ಇಲ್ಲ. ಆದರೆ, ‘ಜನಿವಾರವ ತೆಗೆದು ಮಾದ್ರ ಮನೆಯಲ್ಲಿ ಉಂಡ’ ಎನ್ನುವುದೇ ಅವರಿಗೆ ಧರ್ಮಲಂಡ ಕೆಲಸವಾಗಿ ಕಾಣಿಸದೆ? ಇರಲಿ, ಈಗ ನೀರಲ್ಲಿ ಇಳಿದುಬಿಟ್ಟಿದ್ದೇನೆ, ಏನಾಗುತ್ತದೋ ಎದುರಿಸಿಯೇ ಬಿಡೋಣ ಎಂದುಕೊಂಡು